# ಹೊಸತು




## ಹೊಸ ಸಿಟಿಜನ್ ವಾಚ್

ವಾಚ್‌ಗಳಿಗೆ ಹೆಸರಾದ ಸಿಟಿಜನ್ ಕಂಪೆನಿ ಇದೀಗ ಮಹಿಳೆಯರಿಗಾಗಿಯೇ 'ಇಕೋ ಡ್ರೈವ್ ಸಿಟಿಜನ್' ಸಂಗ್ರಹದಲ್ಲಿ ಹೊಸ ಮಾದರಿಯ ವಾಚ್‌ಗಳನ್ನು ಹೊರತಂದಿದೆ.

ಎರಡು ವೈವಿಧ್ಯಗಳಲ್ಲಿ ಮತ್ತು ಆಕರ್ಷಕ ಬಣ್ಣಗಳಲ್ಲಿ ಸಿಗುತ್ತದೆ. ನಿತ್ಯ ಬಳಕೆಗೂ, ಪಾರ್ಟಿ ವೇರ್‌ಗೂ ಬಳಸಲು ಸೂಕ್ತವಾಗಿದೆ. ಬೆಲೆ ₹ 22 ಸಾವಿರ. ಎಲ್ಲ ಪ್ರಮುಖ ಮಳಿಗೆಗಳಲ್ಲಿ ಲಭ್ಯ.



## ಮಹಿಳೆಯರಿಗಾಗಿ ಪಿಂಕ್ ಟ್ಯಾಬ್ಲೆಟ್

ಮಹಿಳಾ ಗ್ರಾಹಕರಿಗಾಗಿಯೇ ವಿಷ್‌ಟೆಲ್ ಐಆರ್‌ಎ ಥಿಂಗ್ 2 ಟ್ಯಾಬ್ಲೆಟ್ ಬಿಡುಗಡೆ ಮಾಡಿದೆ. ಫ್ಯಾಷನ್ನಿನ ದ್ಯೋತಕವಾಗಿರುವ ಈ ಟ್ಯಾಬ್ಲೆಟ್ ನಸುಗೆಂಪು ಬಣ್ಣದಲ್ಲಿದೆ.

ಕೆಲಸ, ಮನೋರಂಜನೆ, ನೆಟ್ ಶೋಧನೆ ಮತ್ತು ಶಿಕ್ಷಣ ಹೀಗೆ ಬಹುಮುಖಿ ಸಾಮರ್ಥ್ಯವನ್ನು ವಿಷ್‌ಟೆಲ್ ಐಆರ್‌ಎ ಥಿಂಗ್ 2 ಹೊಂದಿದೆ. ಸ್ಮಾರ್ಟ್, ಅತ್ಯಾಕರ್ಷಕ ಡಿಸ್‌ಪ್ಲೇ ಮತ್ತು ವಿಶೇಷವಾದ ಅಪ್ಲಿಕೇಷನ್. ತುರ್ತು ಸಂದರ್ಭಗಳಲ್ಲಿ ರಕ್ಷಣೆ ಒದಗಿಸುವ ಬಿಸೇಫ್, ಸರ್ಕಲ್ ಆಫ್ 6, ಲೈಫ್ 360 ಫ್ಯಾಮಿಲಿ ಲೊಕೇಟರ್ ಇತ್ಯಾದಿ ಅಪ್ಲಿಕೇಷನ್‌ಗಳು ಅವುಗಳಲ್ಲಿ ಕೆಲವು. ವಿವಿಧ ತಿನಿಸುಗಳ ತಯಾರಿಕೆ, ಫ್ಯಾಷನ್ ವಿದ್ಯಮಾನಗಳು, ಡಯಟ್ ಆಹಾರ, ಬಿಲ್ ಪಾವತಿ, ಹೊಸ ಸ್ನೇಹಿತರ ಶೋಧ ಇತ್ಯಾದಿ ಅವಕಾಶವೂ ಇದರಲ್ಲಿದೆ. ಯಾವುದೇ ಟೆಲಿವಿಷನ್ ಕಾರ್ಯಕ್ರಮ ನೋಡಲು ಸಾಧ್ಯವಾಗದಿದ್ದರೆ, ಐಆರ್‌ಎ ಥಿಂಗ್ 2 ಟ್ಯಾಬ್ಲೆಟ್‌ನಲ್ಲಿ 120 ಟೀವಿ ಚಾನೆಲ್‌ಗಳನ್ನೂ ಪಡೆಯಬಹುದು.

ಏಳು ಇಂಚು ಗಾತ್ರದ, ಬಹುಸ್ಪರ್ಶ ಪರದೆ ಮತ್ತು ಅಂಡ್ರಾಯ್ಡ್ 4.0 (ಐಸ್‌ಕ್ರೀಮ್ ಸ್ಯಾಂಡ್‌ವಿಚ್) ಹೃದಯ ಮತ್ತು 1 ಜಿಬಿ ರ್‍ಯಾಮ್ ಇರುವ 1.5 ಗೀಗಾಹರ್ಟ್ಸ್ ಪ್ರೊಸೆಸರ್ ಇದು ಹೊಂದಿದೆ. 4 ಜಿಬಿ ಆಂತರಿಕ ಮೆಮೊರಿಯನ್ನು ಗರಿಷ್ಠ 32 ಜಿಬಿಯವರೆಗೂ ವಿಸ್ತರಿಸಬಹುದು. ಕನ್ನಡ ಸೇರಿದಂತೆ ಭಾರತದ 14 ಭಾಷೆಗಳಲ್ಲಿ ಇದನ್ನು ಬಳಸಬಹುದು.

ವಿಶೇಷ ರಿಯಾಯಿತಿ ದರವನ್ನೂ ವಿಷ್‌ಟೆಲ್ ಐಆರ್‌ಎ ಥಿಂಗ್ 2 ಹೊಂದಿದ್ದು ಬೆಲೆ ₹ 5,499. ವಿವರಗಳಿಗೆ: 9833916643



## ಇಂಕ್‌ಫ್ರುಟ್ ಆನ್‌ಲೈನ್ ಉತ್ಪನ್ನ

ಇಂಕ್‌ಫ್ರುಟ್ ಉತ್ಪನ್ನಗಳ ಆನ್‌ಲೈನ್ ಮಾರಾಟ ಮಳಿಗೆ ಇದೀಗ ಹೊಸ ಉತ್ಪನ್ನಗಳನ್ನು ಪರಿಚಯಿಸಿದೆ. ಇದರಲ್ಲಿ ಟಾಪ್, ಟ್ಯುನಿಕ್, ಬಾಟಮ್, ಫ್ಯಾಷನೆಬಲ್ ಡ್ರೆಸ್, ಒಡವೆಗಳು, ಚಪ್ಪಲಿ, ಬ್ಯಾಗ್ ಮುಂತಾದ ನಿತ್ಯಬಳಕೆಯ ಉತ್ಪನ್ನಗಳು ಸೇರಿವೆ.

ಹೊಸ ಮಾದರಿಯ ನೆಕ್ಲೆಸ್, ಕಿವಿಯೋಲೆ, ಉಂಗುರಗಳು ಕೂಡ ಲಭ್ಯ.

ಬೆಲೆ ಮತ್ತಿತರ ಮಾಹಿತಿಗೆ 080 40972260 ಸಂಪರ್ಕಿಸಬಹುದು.

## ಡೆನ್ವರ್ ಹೇರ್ ಜೆಲ್




'ವೆಟ್‌ಲುಕ್ ಹೆಸರಿನಲ್ಲಿ ಡೆನ್ವರ್ ಹೇರ್ ಜೆಲ್ ಹೊಸದಾಗಿ ಮಾರುಕಟ್ಟೆಗೆ ಬಂದಿದೆ. ಕೂದಲನ್ನು ವಿವಿಧ ಸ್ಟೈಲ್‌ನಲ್ಲಿ ವಿನ್ಯಾಸ ಮಾಡಲು ಇದು ಸಹಾಯಕ. ಈ ಜೆಲ್ ಕೂದಲಿನ ಆಳಕ್ಕಿಳಿದು ಕೆಲಸ ಮಾಡುವುದರಿಂದ ಆರೋಗ್ಯಕರ ಕೂದಲು ಪಡೆಯಬಹುದು ಎನ್ನುತ್ತದೆ ಕಂಪೆನಿ. ಎಲ್ಲ ಪ್ರಮುಖ ಮಳಿಗೆಗಳಲ್ಲಿ ಸಿಗುತ್ತದೆ. ಬೆಲೆ 60 ಎಂಎಲ್‌ಗೆ ₹ 65.